**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ 10, ಫ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ಅನಿಲ ಶೇಟ್ |
| ತಂದೆಯ ಹೆಸರು | ಅಣ್ಣಪ್ಪ ಶೇಟ್ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ಅಕ್ಕಸಾಲಿಗ |
| ವಾಸ್ತವ್ಯ | ಮಾರುತಿ ಜ್ಯುವೆಲರ್ಸ, ಮುಸ್ಲಿಂಗಲ್ಲಿ, ಕುಮಟಾ |

**ಸಾಕ್ಷಿಯನ್ನು ದಿನಾಂಕಃ 05-08-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ನನಗೆ ಇರುತ್ತದೆ. ಸುಮಾರು ವರ್ಷಗಳ ಹಿಂದೆ ಅಂದರೆ 2020 ನೇ ಸಾಲಿನಲ್ಲಿ ಒಂದು ದಿನ ಆರೋಪಿಗಳು ಚಿಕ್ಕ ಚಿಕ್ಕ ಬಂಗಾರದ ಆಭರಣಗಳನ್ನು ತಂದಿದ್ದರು. ಅವುಗಳನ್ನು ತೂಕ ಮಾಡಿ ಒಟ್ಟೂ 83.820 ಗ್ರಾಂ ಇತ್ತು. ತನ್ನ ತಂಗಿಯ ಮದುವೆ ಹಾಗೂ ಸಾಲ ತೀರಿಸಲು ಹಣ ಬೇಕು ಎಂದು ಕೇಳಿರುತ್ತಾರೆ. ನಾನು ಆರೋಪಿಗಳಿಗೆ ಹಣ ನೀಡಿದ್ದು ಎಷ್ಟು ಹಣ ನೀಡಿದ್ದೇನೆ ಎನ್ನುವುದು ನೆನಪಿಲ್ಲ. ಹಣವನ್ನು ನೀಡಿ ಆಭರಣಗಳನ್ನು ವಾಪಸ್ಸು ತೆಗೆದುಕೊಂಡು ಹೋಗುವುದಾಗಿ ಆರೋಪಿಗಳು ಹೇಳಿದ್ದರು. ಆದರೆ ಅವರು ಮತ್ತೆ ನಮ್ಮ ಬಳಿ ಬಂದಿರುವುದಿಲ್ಲ.

ದಿನಾಂಕ 05-08-2020 ರಂದು ಪೋಲೀಸರು ನನಗೆ ಕರೆಮಾಡಿ ಹೊನ್ನಾವರ ಠಾಣೆಗೆ ಬರಲು ಹೇಳಿದರು. ನಾನು ಹೊನ್ನಾವರ ಠಾಣೆಗೆ ಬಂದಾಗ ಆರೋಪಿಗಳು ಠಾಣೆಯಲ್ಲಿ ಇದ್ದರು. ಆರೋಪಿಗಳು ನಿನ್ನ ಬಳಿ ಬಂಗಾರದ ಆಭರಣಗಳನ್ನು ಇಟ್ಟಿದ್ದಾರಾ ಎಂದು ಪೋಲಿಸರು ನನ್ನನ್ನು ಕೇಳಿದ್ದು ನಾನು ಒಪ್ಪಿಕೊಂಡಿರುತ್ತೇನೆ. ಸದರಿ ಆಭರಣಗಳನ್ನು ತಂದುಕೊಡುವಂತೆ ಪೋಲಿಸರು ಹೇಳಿದ್ದರಿಂದ ಅದೇ ದಿನ ಸಾಯಂಕಾಲ ಎಲ್ಲಾ ಆಭರಣಗಳು ಅಂದರೆ ಒಟ್ಟೂ 83.820 ಗ್ರಾಂ ತೂಕದ ಆಭರಣಗಳನ್ನು ಹಾಜರು ಮಾಡಿರುತ್ತೇನೆ. ಸದರಿ ಆಭರಣಗಳನ್ನು ಪೋಲಿಸರು ಚಾಸಾ-11 ರಿಂದ ಮೌಲ್ಯಮಾಪನ ಮತ್ತು ತೂಕ ಮಾಡಿಸಿರುತ್ತಾರೆ. ಪೋಲಿಸರು ಪಂಚನಾಮೆ ಮಾಡಿ ಅವುಗಳನ್ನು ಜಪ್ತು ಮಾಡಿಕೊಂಡು ಛಾಯಾಚಿತ್ರ ತೆಗೆಸಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಛಾಯಾಚಿತ್ರವನ್ನು ನಿಪಿ-7 ಎಂದು ಈಗಾಗಲೇ

ಗುರುತಿಸಲಾಗಿದೆ. ಈ ಪ್ರಕರಣದ ಬಂಗಾರದ ಆಭರಣಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ–1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ</u>**

ಮಾರುತಿ ಜ್ಯುವೆಲರ್ಸ್ ನನ್ನ ಹೆಸರಿನಲ್ಲಿದ್ದು ಅದನ್ನು ಕಳೆದ 5 ವರ್ಷಗಳಿಂದ ನಡೆಸುತ್ತಿದ್ದೇನೆ. ಮೂರು ವರ್ಷಗಳ ಹಿಂದೆ 2 ನೇ ಆರೋಪಿ ನನ್ನ ಅಂಗಡಿಗೆ ಬಂದು ಒಂದು ಉಂಗುರವನ್ನು ಖರೀದಿ ಮಾಡಿದ್ದ. ಅದನ್ನು ಖರೀದಿ ಮಾಡಿದ ಬಗ್ಗೆ ರಸೀದಿ ನೀಡಿದ್ದೇನೋ ಅಥವಾ ಇಲ್ಲವೋ ನೆನಪಿಲ್ಲ.

ಆರೋಪಿಗಳು ಯಾವ ಯಾವ ಮಾದರಿಯ ಎಷ್ಟು ಆಭರಣಗಳನ್ನು ನೀಡಿದ್ದರು ಎನ್ನುವುದನ್ನು ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿಗಳು ಆಭರಣ ನೀಡಿದ ಬಗ್ಗೆ ನಾನು ಅವರಿಗೆ ಯಾವುದೇ ರಸೀದಿಯನ್ನು ನೀಡಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಆರೋಪಿಗಳಿಗೆ ಹಣ ನೀಡಿದ ಬಗ್ಗೆ ಅವರಿಂದ ರಸೀದಿ ಬರೆಸಿಕೊಂಡಿರುವುದಿಲ್ಲ. ಆರೋಪಿಗಳು ನನ್ನ ಬಳಿಗೆ ಬಂದಿಲ್ಲ ಮತ್ತು ಯಾವುದೇ ಆಭರಣಗಳನ್ನು ನನಗೆ ನೀಡಿಲ್ಲ ಮತ್ತು ನಾನು ಅವರಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಭರಣಗಳನ್ನು ಪೋಲಿಸರ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಪಂಚನಾಮೆ ಮಾಡಿ ಸದರಿ ಆಭರಣಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**